## ಕಾಂಬೋಡಿಯಾ, ಥೈಲ್ಯಾಂಡ್ ಮತ್ತು ಶ್ರೀಲಂಕಾ ಪ್ರವಾಸ
(ಥೈಲ್ಯಾಂಡ್-ಬ್ಯಾಂಕಾಕ್, ಪಟ್ಟಾಯಾ, ಕಾಂಬೋಡಿಯಾ-ಅಂಕೊರ್ ವಾಟ್)



ಪಟ್ಟಾಯಾ, ಕೋರಲ್ ಐಲ್ಯಾಂಡ್, ಸಫಾರಿ ವರ್ಲ್ಡ್ ಮತ್ತು ಬ್ಯಾಂಕಾಕ್ ನಗರ ವೀಕ್ಷಣೆ ಹಾಗೂ ಇತರೆ.

ಹೊರಡುವ ತಿಂಗಳು : ಅಕ್ಟೋಬರ್, ಡಿಸೆಂಬರ್

**ಮೊ : 9900080799 / 9880079588**

## 6 ದಿನಗಳ ಶ್ರೀಲಂಕಾ ಪ್ರವಾಸ
ರಾಮಾಯಣ ಕಾಲದ ಸ್ಥಳ ವೀಕ್ಷಣೆ



ಕೊಲೊಂಬೊ, ನೆಗೆಂಬೊ, ಕ್ಯಾಂಡಿ, ಡಾಂಬುಲಾ, ಸೀತಾ ಅಶೋಕವನ, ಹನುಮಾನ್ ದೇವಸ್ಥಾನ ಹಾಗೂ ಶ್ರೀಲಂಕಾ ಸಾಂಸ್ಕೃತಿಕ ಕಾರ್ಯಕ್ರಮಗಳು

ಹೊರಡುವ ತಿಂಗಳು : ಅಕ್ಟೋಬರ್, ಡಿಸೆಂಬರ್

**ಮೊ : 9900080798 / 9900080799**

## ಹಾಂಕಾಂಗ್, ಮಕಾವ್, ಚೈನಾ ಪ್ರವಾಸ
(ಬೀಜಿಂಗ್, ಶಾಂಘೈ, ಮಕಾವ್)



ಡಿಸ್ನಿಲ್ಯಾಂಡ್, ಓಸಿಯನ್ ಪಾರ್ಕ್, ಬೀಜಿಂಗ್, ಶಾಂಘೈ ಸಮ್ಮರ್ ಪ್ಯಾಲೇಸ್, ಮ್ಯೂಸಿಯಂ ಮತ್ತು ಇತರೆ

ಹೊರಡುವ ತಿಂಗಳು : ಡಿಸೆಂಬರ್, ಜನವರಿ

**ಮೊ : 9900080799**

## 3 ದಿನಗಳ ಅಹೋಬಿಲಂ ನವನಾರಸಿಂಹ ಪ್ರವಾಸ



ಪ್ರವಾಸ ಸ್ಥಳಗಳು: ಜ್ವಾಲಾನರಸಿಂಹ, ಪಾವನನರಸಿಂಹ, ವರಹಾನರಸಿಂಹ, ಕಾರಂಜಿನರಸಿಂಹ, ಮಾಲೋಲನರಸಿಂಹ, ಯೋಗನರಸಿಂಹ, ಭಾರ್ಗವನರಸಿಂಹ, ಛತ್ರವಟನರಸಿಂಹ

ಹೊರಡುವ ತಿಂಗಳು : ಅಕ್ಟೋಬರ್, ನವೆಂಬರ್, ಡಿಸೆಂಬರ್

**ಮೊ : 9900080792 / 9900080794**

**Orchid Travel & Tours**

# 98, 1st Floor, D.V.G. Road, Basavanagudi, Bangalore - 560 004.

www.orchidtravels.net

For more details contact

Tel: 080-26670646, 26621983
26670647, 26617178

# ಶಿವ - ಶಕ್ತಿ



**ನ**ವರಾತ್ರಿಯಲ್ಲಿ ನಾವು ದೇವಿಯನ್ನು ಪೂಜಿಸುತ್ತೇವೆ. ಇದಕ್ಕೆ 'ಶಕ್ತಿಪೂಜೆ' ಎಂದೂ ಹೆಸರು. ದೇವರನ್ನು ತಾಯಿಯ ರೂಪದಲ್ಲಿ ನಾವು ಏಕೆ ತಾನೇ ಪೂಜಿಸುತ್ತೇವೆ? ದೇವಿಗೆ 'ಶಕ್ತಿ' ಎಂಬ ಹೆಸರು ಏಕೆ ತಾನೇ ಬಂತು?

**ಶಿವ:** ವೇದಾಂತವು ಪರಮತತ್ತ್ವವನ್ನು 'ಬ್ರಹ್ಮ' ಎಂದು ಕರೆದಿದೆ. ಅದನ್ನೇ ತಂತ್ರಶಾಸ್ತ್ರದಲ್ಲಿ 'ಪರಮಶಿವ' ಎಂದು ಕರೆಯುತ್ತಾರೆ. ಶಿವತತ್ತ್ವವು ನಿರ್ವಿಕಾರವಾದದ್ದು, ಅಂದರೆ ಯಾವತ್ತೂ ಬದಲಾವಣೆ ಹೊಂದದೆ ಇರುವಂಥದ್ದು. ಪರಿಶುದ್ಧ ಚೈತನ್ಯಸ್ವರೂಪವಾದ ಶಿವತತ್ತ್ವವು ಎರಡು ವಿಧ ವಾಗಿ ಕಂಡುಬರುತ್ತದೆ: **೧. ನಿಷ್ಕಲಾ:** ಅಖಂಡವಾಗಿ ಕಂಡು ಬರುವಂಥದ್ದು. **೨. ಸಕಲಾ:** ಭಾಗಗಳಾಗಿರುವಂತೆ ಕಂಡುಬರು ವಂಥದ್ದು. 'ಸಕಲಾ' ಸ್ಥಿತಿಯೇ ಈ ಜಗತ್ತು. ಅಂದರೆ ಪರಮ ಶಿವನೇ ಭಿನ್ನಭಿನ್ನ ರೂಪಗಳಲ್ಲಿ ಇರುವಂತೆ ಕಂಡುಬಂದಾಗ, ಅದನ್ನು 'ಜಗತ್ತು' ಎನ್ನುತ್ತೇವೆ.

**ಶಕ್ತಿ:** ನಾವು ಆಧುನಿಕ ವಿಜ್ಞಾನವನ್ನು ಓದಿದ್ದೇವೆ. ಅದು ಏನು ಹೇಳುತ್ತದೆ? 'ಶಕ್ತಿ'ಯೇ ಎಲ್ಲ ಬಗೆಯ ದ್ರವ್ಯದ ಮೂಲಸ್ಥಿತಿ ಎಂದು. ಒಂದು ಮೂಲ ಭೌತಿಕಶಕ್ತಿಯಿಂದಲೇ ಇಡೀ ಜಗತ್ತು ನಿರ್ಮಾಣಗೊಂಡಿದೆ ಎಂದು ಇದರ ಅರ್ಥ. ಮನಸ್ಸು ಮತ್ತು ಭೌತಿಕ ಪದಾರ್ಥಗಳ ಮೂಲಕ ವ್ಯಕ್ತವಾಗುವ ಈ ಬಗೆಯ ಶಕ್ತಿ, ಅನಂತವೂ ಅಪರಿಮಿತವೂ ಆದ ಮಹಾನ್ ಶಕ್ತಿಯೊಂದರ ಸೀಮಿತ ಅಭಿವ್ಯಕ್ತಿ ಮಾತ್ರ ಎಂದು ತಂತ್ರಶಾಸ್ತ್ರ ಹೇಳುತ್ತದೆ. ಈ ಪರಾಶಕ್ತಿಯಿಂದಲೇ ಈ ಜಗತ್ತು ಹೊರಹೊಮ್ಮುತ್ತದೆ. **'ಶಕ್'** ಎಂಬ ಸಂಸ್ಕೃತ ಧಾತುವಿಗೆ ಈ ಅರ್ಥಗಳಿವೆ: 'ಮಾಡುವ ಬಲ', 'ಕೆಲಸ ಮಾಡುವುದು', 'ಸಾಮರ್ಥ್ಯ ಉಳ್ಳದ್ದು', 'ಹೊಂದಿರು ವಂಥದ್ದು' ಮುಂತಾದುವು. ಇದರಿಂದಲೇ 'ಶಕ್ತಿ' ಎಂಬ ಪದವು ಬಂದಿದೆ.

**ಸಮಾನತೆ:** ಶಿವ ಮತ್ತು ಶಕ್ತಿ ಬೇರೆಯಲ್ಲ; ಇವೆರಡೂ ಒಂದೇ ಪರತತ್ತ್ವದ ಕ್ರಿಯಾರಹಿತ (ಶಿವ) ಮತ್ತು ಕ್ರಿಯಾಸಹಿತ (ಶಕ್ತಿ) ಮುಖಗಳು ಎಂದು ತಂತ್ರಶಾಸ್ತ್ರ ಹೇಳುತ್ತದೆ. ಶಕ್ತಿಯು ಕಾರ್ಯೋನ್ಮುಖವಾಗಿ ಜಗದ್ರೂಪದಲ್ಲಿ ಕಾಣಿಸಿಕೊಳ್ಳುವುದು ಸಕಲಾ ಸ್ಥಿತಿ. ಶಕ್ತಿಯು ಸುಪ್ತವಾಗಿರುವ ಸ್ಥಿತಿಯೇ ನಿಷ್ಕಲಾ ಸ್ಥಿತಿ. ಹೀಗಾಗಿ ಶಕ್ತಿಯೂ ಶಿವನಷ್ಟೇ ಸತ್ಯವಾದುದು. ಶಿವತತ್ತ್ವವೇ ಕ್ರಿಯಾಸ್ಥಿತಿಯಲ್ಲಿ 'ಶಕ್ತಿ'ಯೆಂಬ ಹೆಸರು ಪಡೆಯುತ್ತದೆ. ಶಕ್ತಿ ತತ್ತ್ವವೇ ಸುಪ್ತಸ್ಥಿತಿಯಲ್ಲಿ 'ಶಿವ'ನೆಂಬ ಹೆಸರು ಪಡೆಯುತ್ತದೆ. ಹೀಗಾಗಿ ಶಿವ–ಶಕ್ತಿಯರಲ್ಲಿ ಯಾವ ಭೇದವೂ ಇಲ್ಲ. ಶಿವನೇ ಶಕ್ತಿ, ಶಕ್ತಿಯೇ ಶಿವ.

ಈ ಸಂಕೀರ್ಣ ವಿಚಾರವನ್ನು ಒಂದು ಉದಾಹರಣೆಯ ಮೂಲಕ ತಿಳಿದುಕೊಳ್ಳಬಹುದು. ಸಮುದ್ರದಲ್ಲಿ ಅಲೆಗಳು ಏಳು ತ್ತವೆ. ಅಲೆಗಳು ಸಮುದ್ರಕ್ಕಿಂತ ಭಿನ್ನವೇ, ಅಭಿನ್ನವೇ? ಈ ಪ್ರಶ್ನೆಯೇ ಅಪ್ರಸ್ತುತ. ಏಕೆಂದರೆ, ಅಲೆಗಳು ಮತ್ತು ಸಮುದ್ರಗಳ ನಡುವೆ ಯಾವುದೇ ವ್ಯತ್ಯಾಸವಿಲ್ಲ. ಸಮುದ್ರವಿಲ್ಲದ ಅಲೆಗಳನ್ನು ನಾವು ಊಹಿಸಲೂ ಸಾಧ್ಯವಿಲ್ಲ. ಅದೇ ರೀತಿ ಶಿವ–ಶಕ್ತಿಯರ ಸಂಬಂಧ. ಪರತತ್ತ್ವವನ್ನು ನಿರ್ಗುಣ, ನಿರ್ವಿಕಾರವೆಂದು ಭಾವಿಸಿ ಕೊಂಡಾಗ ಅದನ್ನು 'ಶಿವ'ನೆಂದು ಕರೆಯುತ್ತೇವೆ. 'ಅಲೆ'ಗಳ ತರಹ ಅದು ಪ್ರಪಂಚರೂಪದಲ್ಲಿ ಕಾಣಿಸಿಕೊಂಡಾಗ ಅದನ್ನೇ 'ಶಕ್ತಿ' ಎನ್ನುತ್ತೇವೆ.

ಈ ಉದಾಹರಣೆಯನ್ನೇ ಮುಂದುವರೆಸೋಣ. ಅಲೆಗಳು ಕ್ಷಣಕ್ಷಣಕ್ಕೂ ಬದಲಾಗುತ್ತಿರುತ್ತವೆ. ಹಾಗೆಂದು ಸಮುದ್ರವೂ ಬದಲಾಗುತ್ತಿದೆಯೆಂದು ಹೇಳುತ್ತೇವೆಯೇ? ಅಲೆಗಳು ಎಷ್ಟೇ ಬದಲಾದರೂ, ಅವು ಬದಲಾಗದ ಸಮುದ್ರದ ಅವಿನಾಭಾವ ಅಂಗಗಳಲ್ಲವೇ? ಇದೇ ತರ್ಕವನ್ನು ನಾವು ಶಿವ–ಶಕ್ತಿ ತತ್ತ್ವ ಗಳ ವಿಚಾರದಲ್ಲಿಯೂ ಅಳವಡಿಸಿಕೊಳ್ಳಬೇಕು. ಶಕ್ತಿಯು ಕ್ರಿಯಾತ್ಮಕವಾದುದು. ಅದು ಪರಿಪೂರ್ಣಸತ್ಯದ ಪರಿವರ್ತನ ಶೀಲ ಮುಖ. ಇನ್ನೊಂದು ಮುಖ ಪರಿವರ್ತನರಹಿತವಾದ 'ಶಿವ'. ಹೇಗೆ ಅಲೆಗಳು ಮತ್ತು ಸಮುದ್ರ ಒಂದೇ ಆಗಿವೆಯೋ, ಪರಮಸತ್ಯದ 'ಶಕ್ತಿ' ಮತ್ತು 'ಶಿವ' ರೂಪಗಳು ಬೇರೆಯಾಗಲು ಸಾಧ್ಯವೇ ಇಲ್ಲ. ಕೇವಲ ಪರಿವರ್ತನೆಗೊಳ್ಳುತ್ತದೆ ಎಂದಮಾತ್ರಕ್ಕೆ ಒಂದು ವಸ್ತುವನ್ನು ಅನಿತ್ಯ ಎಂದು ಹೇಳಲು ಬರುವುದಿಲ್ಲ. ಹೀಗಾಗಿ ಶಿವ ಮತ್ತು ಶಕ್ತಿ – ಎರಡೂ ರೂಪಗಳು ಎಲ್ಲ ವಿಧ ದಲ್ಲೂ ಸಮಾನವಾದವು ಎನ್ನುವುದು ತಂತ್ರಶಾಸ್ತ್ರದ ಅಭಿಮತ.

**ಪ್ರಕಾಶ – ವಿಮರ್ಶ:** ತಂತ್ರಶಾಸ್ತ್ರದ ಪ್ರಕಾರ, ಪರಮತತ್ತ್ವವು ಸಂಪೂರ್ಣವಾಗಿ ಸಕ್ರಿಯವೂ ಅಲ್ಲ, ನಿಷ್ಕ್ರಿಯವೂ ಅಲ್ಲ. ಅದು ಎರಡೂ ಸ್ವಭಾವಗಳನ್ನು ಹೊಂದಿದೆ. ಶಿವತತ್ತ್ವವು ಈ ಪರಮತತ್ತ್ವದ ಪ್ರಕಾಶ ಅಂಶ. ಅಂದರೆ, ಅದು ಸ್ವಯಂಪ್ರಕಾಶಕ, ನಿರಪೇಕ್ಷ ಮತ್ತು ನಿಷ್ಕ್ರಿಯ. ಇದನ್ನು **'ಅಹಂ'** – 'ನಾನು' ಎಂದು ಗುರುತಿಸಬಹುದು. ಇದು ಜ್ಞಾತೃವಿನ ಭಾವವನ್ನು (ಜ್ಞಾನವನ್ನು ಅರಿಯುವವನು) ಹೊಂದಿರುತ್ತದೆ. ಶಕ್ತಿಯು ಅದರ **ವಿಮರ್ಶ** ಅಂಶ. ಅಂದರೆ ಶಿವತತ್ತ್ವದಲ್ಲಿ ಅಂತರ್ಲೀನವಾಗಿರುವ ಕ್ರಿಯಾತ್ಮಕ ಅಂಶ. ಇದನ್ನು **'ಇದಂ'** – ಇಲ್ಲಿರುವ ವಸ್ತು (ನನಗೆ ಹೊರತಾದ) ಎಂದು ಗುರುತಿಸಬಹುದು. ಇದು ಜ್ಞೇಯವಸ್ತುವಿನ ಭಾವವನ್ನು ಹೊಂದಿರುತ್ತದೆ. ಶಿವ ಎಂಬುದು ಶುದ್ಧಚೈತನ್ಯ. ಅದು ದ್ರಷ್ಟಾ ಅಥವಾ ವಿಷಯಿ. ಶಕ್ತಿ ಎನ್ನುವುದು ಆ ನಿರಪೇಕ್ಷ ಶುದ್ಧ ಚೈತನ್ಯದಲ್ಲಿ ಅಂತರ್ಗತವಾಗಿರುವ ಕ್ರಿಯಾತ್ಮಕ ಸಾಮರ್ಥ್ಯ. ಅದು ದರ್ಶನ ಅಥವಾ ವಿಷಯ. ಆದರೆ ತಂತ್ರಶಾಸ್ತ್ರವು ಇವುಗಳು ಪಾರಮಾರ್ಥಿಕವಾಗಿ ಅಭೇದ ಎನ್ನುತ್ತದೆ. ಉಪನಿಷತ್ತುಗಳು **'ನೇಹ ನಾನಾಸ್ತಿ ಕಿಂಚನ'** – ಆತ್ಮವಸ್ತುವನ್ನು ಬಿಟ್ಟು ಬೇರೆ ಏನೂ ಇಲ್ಲ ಎನ್ನುತ್ತವೆ. ಅದೇ ರೀತಿ ಎಲ್ಲವೂ ಶಿವ–ಶಕ್ತಿ ಸ್ವರೂಪವೇ ಎನ್ನುತ್ತದೆ ತಂತ್ರ. ಹಾಗಾದರೆ ಅದು ಬೇರೆ ಎನ್ನುವ ರೀತಿಯಲ್ಲಿ ನೋಡುವುದು ಏನನ್ನು? ತನ್ನನ್ನೇ. ಬೇರೆ ಎನ್ನುವ ರೀತಿಯಲ್ಲಿ ಅನುಭವಿಸುವುದು ಏನನ್ನು? ತನ್ನನ್ನೇ. ಒಂದೇ ಪರತತ್ತ್ವವು ತನ್ನೊಳಗೆ ತಾನು ಇರುವಂತೆ ಕಂಡುಬರುತ್ತದೆ. ಇನ್ನೊಮ್ಮೆ ತಾನೇ ವಿಭಾಗಗೊಂಡು, ತನ್ನನ್ನೇ ತಾನು ನೋಡುವಂತೆ ಮಾಡಿಕೊಳ್ಳುತ್ತದೆ. ಇವೆರಡೂ ಒಂದೇ ಸ್ಥಿತಿಯ ಎರಡು ಕಾಣ್ಕೆಗಳೆಂದು ತಂತ್ರಶಾಸ್ತ್ರ ಹೇಳುತ್ತದೆ. ಅದರ ಪ್ರಕಾರ, "ಯಾವುದು ಬಾಹ್ಯದಲ್ಲಿ ಕಂಡುಬರುತ್ತದೆಯೋ, ಹಾಗೆ ಕಂಡು ಬರುವುದು ಅದು ಅಂತಸ್ಥಿತವಾಗಿ ಇರುವುದರಿಂದ ಮಾತ್ರವೇ" ***(ವರ್ತಮಾನಾವಭಾಸಾನಾಮ್ ಭಾವಾನಾಮ್ ಅವಭಾಸಮ್ ಅಂತಃಸ್ಥಿತವತಾಮ್ ಏವ ಘಟತೇ ಬಹಿರಾತ್ಮನಾ).***

**ಅನುಭವ ಮತ್ತು ಪ್ರಜ್ಞೆ:** ಅನುಭವ ಅಥವಾ ಪ್ರಜ್ಞೆಯಲ್ಲಿ ಎರಡು ವಿಧ: **೧. ಪೂರ್ಣಾನುಭವ ಅಥವಾ ಅಖಂಡ ಪ್ರಜ್ಞೆ** ಮತ್ತು **೨. ಅಪೂರ್ಣ ಅನುಭವ ಅಥವಾ ಖಂಡ ಪ್ರಜ್ಞೆ.** ವೇದಾಂತದಲ್ಲಿ ಬರುವ ಬ್ರಹ್ಮಾನುಭವ ಅಥವಾ ಆತ್ಮ ಪ್ರಜ್ಞೆಯು ಪೂರ್ಣಾನುಭವ ಅಥವಾ ಅಖಂಡಪ್ರಜ್ಞೆ. ಇದು ಅನಂತವಾದುದರ ಅನುಭವ. ಲೌಕಿಕ ಅನುಭವ ಮತ್ತು ಅವು ಗಳಲ್ಲಿರುವ ಪ್ರಜ್ಞೆಯು ಭಾಗಶಃ ಅನುಭವ ಅಥವಾ ಖಂಡ ಪ್ರಜ್ಞೆಯ ಪ್ರತೀಕವಾಗಿದೆ. ಇದು ಸಾಂತವಾದುದರ ಅನುಭವ. ತಂತ್ರಶಾಸ್ತ್ರದಲ್ಲಿ ಶಿವ ಮತ್ತು ಸುಪ್ತಶಕ್ತಿಗಳು ಪೂರ್ಣಾನುಭವದ ದ್ಯೋತಕಗಳು. ಕ್ರಿಯಾತ್ಮಕ ಶಕ್ತಿ ಮತ್ತು ಲೌಕಿಕ ವ್ಯವಹಾರಗಳ ಅನುಭವಗಳು ಅಪೂರ್ಣಾನುಭವದ ಸಂಕೇತಗಳು. ಅದ್ವೈತವು ಅಪೂರ್ಣ ಅನುಭವವನ್ನು 'ಮಾಯೆ' ಎಂದು ಕರೆದು ನಿರಾಕರಿ ಸುತ್ತದೆ. ಆದರೆ, ಅಪೂರ್ಣ ಅನುಭವವು ಪೂರ್ಣಾನುಭವದ ಒಂದು ಅವಿಭಾಜ್ಯ ಅಂಗವಾದ್ದರಿಂದ ಅದೂ ಕೂಡ ಸತ್ಯವೇ ಎಂದು ತಂತ್ರಶಾಸ್ತ್ರವು ಪ್ರತಿಪಾದಿಸುತ್ತದೆ. ಪೂರ್ಣಾನುಭವದಲ್ಲಿ ಶಕ್ತ್ಯಂಶವು ಸುಪ್ತವಾಗಿದ್ದರೆ, ಅಪೂರ್ಣಾನುಭವದಲ್ಲಿ ಅದು ವಿವಿಧ ರೀತಿಯ ಲೌಕಿಕ ಅನುಭವಗಳು ಅಥವಾ ಪ್ರಜ್ಞೆಗಳಾಗಿ ವಿಂಗಡಣೆ ಹೊಂದುವ ಸಾಮರ್ಥ್ಯವನ್ನು ಪ್ರಕಟಿಸುತ್ತದೆ. ಇದನ್ನು ಬೀಜ ಮತ್ತು ಸಸ್ಯಕ್ಕೆ ಹೋಲಿಸಬಹುದು. ಬೀಜದಲ್ಲಿ ಸಸ್ಯವಾಗುವ ಸತ್ವಾಂಶ ಇದ್ದೇ ಇರುತ್ತದೆ. ಆದರೆ ಅದು ಸಸ್ಯ ದಲ್ಲಿ ಪ್ರಕಟಗೊಳ್ಳುತ್ತದೆ, ಅಷ್ಟೇ. ಹಾಗೆಯೇ ತಂತ್ರಶಾಸ್ತ್ರದ ಪ್ರಕಾರ ಸಾಂತದ ಅನುಭವವು ಅನಂತದ ಅನುಭವದೊಂದಿಗೆ ಅವಿನಾ ಭಾವ ಸಂಬಂಧ ಹೊಂದಿರುತ್ತದೆ. ಹೀಗಾಗಿ ಲೌಕಿಕ ಅನುಭವವು ಅನಿತ್ಯ ಎನ್ನುವುದು ಸರಿಯಲ್ಲ. ಈ ನಿಟ್ಟಿನಲ್ಲಿ ನೋಡಿದಾಗ ಇಂಥ ಅನುಭವದ ವ್ಯಕ್ತಕ್ಷೇತ್ರವಾದ ಜಗತ್ತು ಕೂಡ ನಿಜವೇ.

**ಕಲೆಗಳು:** ಯಾವ ಸ್ಥಿತಿಯಲ್ಲಿ ಶಿವ–ಶಕ್ತಿಯ ಸಂಪೂರ್ಣ ಮಿಲನವು ಕಂಡುಬರುತ್ತದೆಯೋ ಅದೇ ನಿಷ್ಕಲಾ ಸ್ಥಿತಿ. ಅದು ನಿರಪೇಕ್ಷ ಸ್ಥಿತಿ. ಈ ಬಗೆಯ ಪರಿಶುದ್ಧ ನಿರ್ಗುಣ ಸ್ಥಿತಿಯನ್ನು **'ಶಕ್ತಿ–ಸ್ವಾರೂಪ್ಯ'** (ಶಕ್ತಿಯ ಪರಿಶುದ್ಧ ಸ್ಥಿತಿ) ಎಂದೂ ಕರೆಯುತ್ತಾರೆ.

ಆದರೆ ನಮ್ಮ ಸಾಧಾರಣ ಲೌಕಿಕ ಅನುಭವ ಇದಕ್ಕಿಂತ ಭಿನ್ನವಾದುದು. ಇಲ್ಲಿ ಶಕ್ತಿಯು ಕ್ರಿಯಾತ್ಮಕವಾಗಿದೆ. ಇದನ್ನು **ಮಾಯಾಶಕ್ತಿ** ಎಂದು ಕರೆಯುತ್ತಾರೆ. ಇದೇ ನಮ್ಮ ನೋಟದಲ್ಲಿ ಭೇದ ಅಥವಾ ಭಿನ್ನತೆಯನ್ನು ಉಂಟುಮಾಡುವಂಥದ್ದು. ಈ ಭಿನ್ನತೆಯು ಹಲವಾರು ಬಗೆಯ ಅನುಭವಗಳ ಮತ್ತು ರೂಪಗಳ ವೈವಿಧ್ಯತೆಯನ್ನು ಉಂಟುಮಾಡುತ್ತದೆ. ಇದೇ **ಸಕಲಾ ಸ್ಥಿತಿ.**

ಹಾಗಾದರೆ **'ಕಲಾ'** ಎಂದರೇನು? ತಂತ್ರಶಾಸ್ತ್ರದಲ್ಲಿ ಐದು ಬಗೆಯ **'ಕಂಚುಕ'**ಗಳ ಪ್ರಸ್ತಾಪ ಇದೆ. ಕಂಚುಕ ಎಂದರೆ ಶಿವನ ಶಕ್ತಿಯನ್ನು ಸಂಕೋಚಗೊಳಿಸುವ ಅಂಶಗಳು. ಅವುಗಳೆಂದರೆ, **ಕಲಾ, ನಿಯತಿ, ರಾಗ, ವಿದ್ಯಾ** ಮತ್ತು **ಕಾಲ**. ಇವುಗಳ ಪ್ರಭಾವ ದಿಂದಲೇ ಪ್ರಪಂಚದ ಮೂಲಘಟಕಗಳಾದ ಮೂವತ್ತಾರು ತತ್ತ್ವಗಳು ಮೂಡಿಬರುತ್ತವೆ.

ಇವುಗಳಲ್ಲಿ ಕಲೆಯು ಶಿವನ ಸರ್ವಕರ್ತೃತ್ವವನ್ನು ಸಂಕೋಚ ಗೊಳಿಸುತ್ತದೆ. ಕಲೆಯನ್ನು ಇನ್ನೊಂದು ವಿಧವಾಗಿಯೂ ವಿವರಿಸುತ್ತಾರೆ. ಶಿವನಲ್ಲಿ ಯಾವುದೇ ಭಾಗಗಳಿರುವುದಿಲ್ಲ. ಶಕ್ತಿಯು ಹದಿನಾರು ಭಾಗಗಳನ್ನು ಹೊಂದಿರುತ್ತದೆ. ಇದನ್ನೇ ಕಲಾ ಎನ್ನುತ್ತಾರೆ. ಹಿಂದೆ ಹೇಳಿದ ಶಕ್ತಿ–ಸ್ವಾರೂಪ್ಯ ಸ್ಥಿತಿಯಲ್ಲಿ ಶಕ್ತಿಯು ಈ ಎಲ್ಲಾ ಷೋಡಶಕಲೆಗಳಿಂದ ಕೂಡಿ ಪರಿಪೂರ್ಣವಾಗಿರುತ್ತದೆ. ಇದೇ ಇಡೀ ಜಗತ್ತಿನ ಮೂಲ ಆಕರ. ಈ ಸ್ಥಿತಿಯನ್ನು **ಸಾಮನೀ** ಎಂದೂ ಕರೆಯುತ್ತಾರೆ. ಯಾವುದೇ ದೇವತಾರೂಪವನ್ನು ಅದರ ಶಕ್ತಿಯ ಹದಿನಾರು ಕಲೆಗಳೊಂದಿಗೆ ಪರಿಭಾವಿಸಿದರೆ ಅದನ್ನು **ಪೂರ್ಣಕಲಾಮೂರ್ತಿ** ಎಂದು ಹೆಸರಿಸುತ್ತಾರೆ. ಆಂಶಿಕವಾಗಿ ಭಾವಿಸಿದಾಗ, **ಅಂಶಾಂಶಮೂರ್ತಿ** ಎನ್ನುತ್ತಾರೆ.

ಇತರ ಕಂಚುಕಗಳಲ್ಲಿ, **ನಿಯತಿ**ಯು ಶಿವನ ಸ್ವಾತಂತ್ರ್ಯವನ್ನು ಸಂಕೋಚಗೊಳಿಸುತ್ತದೆ. **ರಾಗ**ವು ಆತ್ಮಕ್ಕಿಂತ ಭಿನ್ನವಸ್ತುಗಳಲ್ಲಿ ಆಸಕ್ತಿಯನ್ನು ಉಂಟುಮಾಡುತ್ತದೆ. **ವಿದ್ಯೆ**ಯು ಶಿವನ ಸರ್ವಜ್ಞತ್ವ ವನ್ನು ಸಂಕೋಚಗೊಳಿಸುತ್ತದೆ. **ಕಾಲ**ವು ಶಾಶ್ವತ ಅಸ್ತಿತ್ವವನ್ನು ಪರಿಮಿತಗೊಳಿಸುತ್ತದೆ.

**ತತ್ತ್ವಗಳು:** ಪರಿಪೂರ್ಣ ಮತ್ತು ಪರಿಶುದ್ಧ ಶಿವ–ಶಕ್ತಿ ಸ್ಥಿತಿಯಿಂದ, ಈ ಪ್ರಪಂಚವು ವಿಕಸನಗೊಂಡಿದ್ದಾದರೂ ಹೇಗೆ